ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಸಂ. ಮಂವಿ/ಎಸಿಸಿ/ಸಿಆರ್5/ಸಿಬಿಸಿಎಸ್-ಯುಜಿ/2018-19/ಎ10

ಕುಲಸಚಿವರ ಕಚೇರಿ,
ಮಂಗಳಗಂಗೋತ್ರಿ- 574199

ದಿನಾಂಕ: 4/9/2018

**ಸುತ್ತೋಲೆ**

ವಿಷಯ: ಪದವಿ ಮಟ್ಟದ ಕಾರ್ಯಕ್ರಮಗಳಿಗೆ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಅಳವಡಿಸಲು ಉದ್ದೇಶಿಸಲಾದ ಕಾರ್ಯಗಾರದ ದಿನಾಂಕವನ್ನು ಮುಂದೂಡಿದ ಬಗ್ಗೆ.

ಉಲ್ಲೇಖ: ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 27/8/2018.

** ** **

ಪದವಿ ಮಟ್ಟದ ಕಾರ್ಯಕ್ರಮಗಳಿಗೆ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಅಳವಡಿಸುವ ಬಗ್ಗೆ ದಿನಾಂಕ 06-09-2018 ರಂದು ಹಮ್ಮಿಕೊಂಡಿರುವ ಕಾರ್ಯಾಗಾರವನ್ನು ಅನಿವಾರ್ಯ ಕಾರಣಗಳಿಂದಾಗಿ ದಿನಾಂಕ 15-09-2018 ರಂದು ನಡೆಸಲು ನಿರ್ಣಯಿಸಲಾಗಿದೆ. ಕಾರ್ಯಾಗಾರದ ಸ್ಥಳ ಮತ್ತು ಸಮಯದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ತಮ್ಮನ್ನು ವಿನಂತಿಸಲಾಗಿದೆ.

ಕರಡು ಪತ್ರಕ್ಕೆ ಕುಲಸಚಿವರ
ಅನುಮೋದನ ಪಡೆಯಲಾಗಿದೆ.

ಕುಲಸಚಿವರ ಪರವಾಗಿ

ಗೆ:

1. ಪ್ರಾಂಶುಪಾಲರುಗಳು, ಪದವಿಮಟ್ಟದ ಕಾರ್ಯಕ್ರಮಗಳನ್ನು (ಬಿ.ಎಡ್ ಹೊರತುಪಡಿಸಿ) ನಡೆಸುವ ಕಾಲೇಜುಗಳು, ಮಂಗಳೂರು ವಿಶ್ವವಿದ್ಯಾನಿಲಯ- ಕಾರ್ಯಾಗಾರದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸಬಹುದಾಗಿ ಸೂಚಿಸಲಾಗಿದೆ.
2. ಅಧ್ಯಕ್ಷರು, ಪದವಿ ಮಟ್ಟದ ಅಧ್ಯಯನ ಮಂಡಳಿಗಳು, ಮಂಗಳೂರು ವಿಶ್ವವಿದ್ಯಾನಿಲಯ.
3. ಸಿಬಿಸಿಎಸ್ ವಿನಿಯಮ ರಚನಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು.

# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಸಂ. ಮಂವಿ/ಶೈಕ್ಷಣಿಕ/ಸಿಆರ್‌೯/ಸಿಬಿಎಸ್‌ಸಿ-ಯುಜಿ/2018-19/ಎ10

ಕುಲಸಚಿವರ ಕಚೇರಿ,
ಮಂಗಳಗಂಗೋತ್ರಿ- 574199

ದಿನಾಂಕ: 27/8/2018

## ಸುತ್ತೋಲೆ

ವಿಷಯ: ಪದವಿ ಮಟ್ಟದ ಕಾರ್ಯಕ್ರಮಗಳಿಗೆ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಅಳವಡಿಸುವ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸುವ ಕುರಿತು.

ಉಲ್ಲೇಖ: 1) ಯುಜಿಸಿ ಪತ್ರ ಸಂಖ್ಯೆ: F.I-I/2015 (CM), ದಿನಾಂಕ: 8-1-2015.
2) ಈ ಕಚೇರಿ ಅಧಿಸೂಚನೆ ಸಂಖ್ಯೆ: ಮಂವಿ/ಶೈಕ್ಷಣಿಕ/ಸಿಆರ್‌26/ಸಿಬಿಎಸ್-ಯುಜಿ/2016-17/ಎ2 ದಿನಾಂಕ: 10-11-2017.

** ** **

ಉಲ್ಲೇಖ (1) ರ ಪತ್ರದ ಸೂಚನೆ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಮಟ್ಟದ ಕಾರ್ಯಕ್ರಮಗಳಿಗೆ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಅಳವಡಿಸಲು ಉಲ್ಲೇಖ (2) ರ ಅಧಿಸೂಚನೆ ಮೂಲಕ ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ಸಮಿತಿಯ ಸಭೆಗಳನ್ನು ನಡೆಸಿ ಪದವಿಮಟ್ಟದ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಪ್ರಕಾರ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮವನ್ನು ತಯಾರಿಸಲಾಗಿರುತ್ತದೆ. ಸದರಿ ವಿನಿಯಮವನ್ನು ಶೈಕ್ಷಣಿಕ ವರ್ಷ 2019-20ನೇ ಸಾಲಿನಿಂದ ಜಾರಿಗೊಳಿಸುವುದಕ್ಕಾಗಿ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು ಪದವಿ ಮಟ್ಟದ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳು ಹಾಗೂ ಸಮಿತಿ ಸದಸ್ಯರುಗಳನ್ನೊಳಗೊಂಡು ದಿನಾಂಕ 6-9-2018 ರಂದು ಪೂರ್ವಾಹ್ನ ಗಂಟೆ 10.00 ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಒಳಾಂಗಣ ಕ್ರೀಡಾ ಸಂಕೀರ್ಣದ ಸೆಮಿನಾರ್ ಹಾಲ್‌ನಲ್ಲಿ ಕಾರ್ಯಾಗಾರವನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ.

ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ತಮ್ಮನ್ನು ವಿನಂತಿಸಲಾಗಿದೆ.

ಕರಡು ವಿನಿಯಮವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಂತರ್ಜಾಲದಿಂದ ಪಡೆದುಕೊಳ್ಳುವುದು.

ಕರಡು ಪತ್ರಕ್ಕೆ ಕುಲಸಚಿವರ
ಅನುಮೋದನೆ ಪಡೆಯಲಾಗಿದೆ.

ಕುಲಸಚಿವರ ಪರವಾಗಿ

ಗೆ:

1) ಪ್ರಾಂಶುಪಾಲರುಗಳು, ಪದವಿಮಟ್ಟದ ಕಾರ್ಯಕ್ರಮಗಳನ್ನು (ಬಿ.ಎಡ್ ಹೊರತುಪಡಿಸಿ) ನಡೆಸುವ ಕಾಲೇಜುಗಳು, ಮಂಗಳೂರು ವಿಶ್ವವಿದ್ಯಾನಿಲಯ- ಕಾರ್ಯಾಗಾರದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸಬಹುದಾಗಿ ಸೂಚಿಸಲಾಗಿದೆ.
2) ಅಧ್ಯಕ್ಷರು, ಪದವಿ ಮಟ್ಟದ ಅಧ್ಯಯನ ಮಂಡಳಿಗಳು, ಮಂಗಳೂರು ವಿಶ್ವವಿದ್ಯಾನಿಲಯ.
3) ಸಿಬಿಸಿಎಸ್ ವಿನಿಯಮ ರಚನಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು.

ಪ್ರತಿ.

1. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ- ಧ್ವನಿವರ್ಧಕ ಹಾಗೂ ಇನ್ನಿತರ ಅಗತ್ಯ ವ್ಯವಸ್ಥೆಗಳಿಗಾಗಿ.
2. ನಿರ್ದೇಶಕರು, ಗಣಕ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ- ಪ್ರಾಜೆಕ್ಟರ್ ವ್ಯವಸ್ಥೆಗಾಗಿ.
3. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ- ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು/ ಕುಲಸಚಿವರು (ಪರೀಕ್ಷಾಂಗ) ರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
5. ಅಧೀಕ್ಷಕರು, ಆಡಳಿತ ವಿಭಾಗ, ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ- ವಾಹನ ಸೌಲಭ್ಯ ಒದಗಿಸುವ ಬಗ್ಗೆ.